**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.576–16**

| | | |
|---|---|---|
| ಹೆಸರು | ನವೀನ | ಪ್ರಾ.ಸಾ.2 |
| ತಂದೆಯ ಹೆಸರು | ಕೃಷ್ಣಪ್ಪ | ಚಾ.ಸಾ.2 |
| ವಯಸ್ಸು | 31ವರ್ಷ | |
| ಕೆಲಸ | ಖಾಸಗಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಕೋಡಿಹಳ್ಳಿ | ದಿ:31.10.2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ಮೃತ ಪಿ.ಸಿ.ಕುಮಾರ್ ಮೆಡಿಸನ್ ಡಿಸ್ಟ್ರಿಬ್ಯೂಟಿವ್ ಕಂಪನಿಯಲ್ಲಿ ಸೇಲ್ಸ ಮೆನ್ ಆಗಿ ಕೆಲಸ ಮಾಡುತ್ತಿದ್ದ. ಅವರು ಈಗ ಸುಮಾರು 2 ವರ್ಷಗಳ ಹಿಂದೆ ರಾತ್ರಿ 7.30 ರಿಂದ 8.00 ಗಂಟೆ ಸಮಯದಲ್ಲಿ ಎಂ.ವಿ.ಜೆ ಆಸ್ಪತ್ರೆಯ ಬಳಿ ಇರುವ ನಮ್ಮ ವಿನಾಯಕ ಮೆಡಿಕಲ್ ಫಾರ್ಮಾಗೆ ಮೆಡಿಸಿನ್ ನೀಡಲು ಬಂದಿದ್ದು, ರಸ್ತೆ ದಾಟುತ್ತಿದ್ದಾಗ ಬೆಂಗಳೂರು ಕಡೆಯಿಂದ ಕೋಲಾರದ ಕಡೆಗೆ , ಕೆಎ–04–ಇಎ–8259 ಸಂಖ್ಯೆಯ ಬಜಾಜ ಮೋಟರ್ ಸೈಕಲ್ ಅನ್ನು ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ಸದರಿ ಪಿ.ಸಿ.ಕುಮಾರ್ ರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಅವರಿಗೆ ಕಿವಿ ಮತ್ತು ತಲೆಯಿಂದ ರಕ್ತಸ್ರಾವ ಆಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಕೂಡಲೇ ನಾನು ಪೊ.ಠಾಣೆಗೆ ಕರೆ ಮಾಡಿ ವಿಚಾರ ತಿಳಿಸಿರುತ್ತೇನೆ. ಕೂಡಲೇ ಪೊಲೀಸರು ಮತ್ತು ಆಂಬುಲೆನ್ಸರವರು ಸ್ಥಳಕ್ಕೆ ಬಂದು ಮೃತ ದೇಹವನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ. ಈ ವಿಚಾರವಾಗಿ ನಾನು ತನಿಖಾಧೀಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಅಪಘಾತವಾದಾಗ ಸಮಯ ಸಂಜೆ 7.30 ಕ್ಕೆ ಆಗಿದ್ದು, ಆಗ ಕತ್ತಲಾಗಿತ್ತು ಎಂದರೆ ಸರಿ. ಎಂ.ವಿ.ಜೆ. ಆಸ್ಪತ್ರೆಯ ಪಕ್ಕದಲ್ಲಿ ನಮ್ಮ ಮೆಡಿಕಲ್ ಶಾಪ ಇದೆ ಎಂದರೆ ಸರಿ. ಅಪಘಾತವು ಕೋಲಾರದ ಕಡೆ ಹೋಗುವ ಮುಖ್ಯ ರಸ್ತೆಯಲ್ಲಿ ಆಗಿದೆ ಎಂದರೆ ಸರಿ. ನಮ್ಮ ಶಾಪ ನಿಂದ ಅಪಘಾತದ ಸ್ಥಳ ಸುಮಾರು 60 ರಿಂದ 70 ಅಡಿ ಅಂತರ ಇದೆ ಎಂದರೆ ಸರಿ. ಸ್ಥಳದ ಅಕ್ಕ ಪಕ್ಕದಲ್ಲಿ ಬೀದಿ ದೀಪಗಳು ಇಲ್ಲ ಎಂದರೆ ಸರಿ.

ರಾಷ್ಟ್ರೀಯ ಹೆದ್ದಾರಿಯಾದ ಕಾರಣ ಅಲ್ಲಿ ಎತೆಚವಾಗಿ ವಾಹನಗಳು ಓಡಾಡುತ್ತದೆ ಎಂದರೆ ಸರಿ. ಅಪಘಾತವಾದಾಗ ನಾನು ಅಂಗಡಿಯಲ್ಲಿದೇ ಎಂದರೆ ಸರಿ. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲದಿದ್ದರು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊ.ಠಾಣೆಯಲ್ಲಿ ನೋಡಿರುತ್ತೇನೆ ಎಂದು ಹೇಳಿರುತ್ತಾರೆ. ಮೃತ ವ್ಯಕ್ತಿಯು ಅಡ್ಡ ಬಂದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**